**<u>ಹೆಚ್ಚುವರಿ ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಮುಧೋಳ</u>**

**<u>ಸಿ.ಸಿ. ನಂ.461/2022</u>**

1) ಕರ್ನಾಟಕ ಸರ್ಕಾರ

...ಫಿರ್ಯಾದಿ.

- ವಿರುದ್ಧ -

1) Vithal @ Vittya Saidu @ Saidappa Mang @
Vittal @ Vittya @ Saiddu @ Saidappa and another

.....ಆರೋಪಿತರು

= = = = =

ಉಪಸ್ಥಿತರು: ಶ್ರೀಮತಿ. ಗೀತಾಮಣಿ,
B.A. L.L.B
ಹೆಚ್ಚುವರಿ, ಹಿರಿಯ ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಮುಧೋಳ.

ಆರೋಪಿತರು:
1) Vithal @ Vittya Saidu @ Saidappa Mang @ Vittal @ Vittya @ Saiddu @ Saidappa.
R/o:Junjjarakoppa Galli, Mudhol.
2) Parashuram @ Parsya Kullurapp Bajantri @ Parashuram @ Parsya.
R/o:Bajantri Galli, Mudhol.

**<u>: : ದೋಷಾರೋಪಣೆ: :</u>**

ದಿ:06-03-2022 ರಂದು ಸಂಜೆ 6.00 ಗಂಟೆಗೆ ಹಿರೋ ಪ್ಯಾಶನ ಪ್ರೋ ಕಂಪನಿಯ ಮೋಟಾರ ಸೈಕಲ್ ನಂ.MH-38/S-4659 ನೇದ್ದನ್ನು ಪಡೆದುಕೊಂಡು ಆರೋಪಿ ನಂ.1 ಈತನು ತನ್ನ ಮನೆಯಲ್ಲಿನ ಮಚ್ಚನ್ನು ಹಾಗೂ ಆರೋಪಿ ನಂ.2 ನೇದವನಾದ ಪರಶುರಾಮ ಈತನ ಮನೆಯಲ್ಲಿದ್ದ ಚಾಕನ್ನು ತೆಗೆದುಕೊಂಡು ಅದೇ ದಿನ ದಿ:06-03-2022 ರಂದು 20.45 ಗಂಟೆಯ ಸುಮಾರಿಗೆ ಮುಧೋಳ ಪಟ್ಟಣದ ಆನಂದ ನಗರದ ಫಿರ್ಯಾದಿದಾರಳ ಮನೆಗೆ ಹೋಗಿ ಫಿರ್ಯಾದಿಯ ಮನೆಯ ಮೊದಲ ಮಹಡಿ ಮನೆಯಲ್ಲಿ ಗೃಹಾತಿಕ್ರಮಣ ಮಾಡಿದ್ದು, ಆ ಮೂಲಕ ಅಪರಾದ ಕಲಂ.457 ಸಹವಾಚಕ 34 ಐಪಿಸಿ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

Scanned with CamScanner

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮೇಲ್ಕಾಣಿಸಿದ ಕಾರಣಕ್ಕಾಗಿ ಆರೋಪಿ ನಂ.1 ನೇದವಾನದ ವಿಠ್ಠಲ ಈತನು ಫಿರ್ಯಾದಿದಾರಳಾದ ಶಕುಂತಲಾ ಇವರಿಗೆ ಮಚ್ಚನ್ನು ತೋರಿಸಿ ಅಂಜಿಸಿ ಅವಳು ಧರಿಸಿದ್ದ ಆಭರಣಗಳುಃ-

1. 45 ಗ್ರಾಂ ತೂಕದ ಬಂಗಾರ ಬಿಲ್ವಾರ
2. 42 ಗ್ರಾಂ ತೂಕದ ಬಂಗಾರದ ಪಾಟಲಿ
3. 05 ಗ್ರಾಂ ತೂಕದ ಹೆಣ್ಣು ಮಕ್ಕಳ ಹರಳಿನ ಉಂಗುರ ಒಂದು
4. 05 ಗ್ರಾಂ ತೂಕದ ಹೆಣ್ಣು ಮಕ್ಕಳ ಹರಳಿನ ಉಂಗುರ ಒಂದು
5. 30 ಗ್ರಾಂ ತೂಕದ ಬಂಗಾರದ ತಾಳಿ ಚೈನ್
6. 05 ಗ್ರಾಂ ತೂಕದ ಬಂಗಾರದ ರುದ್ರಾಕ್ಷಿ ಸರ ಒಂದು

ಹಾಗೂ ಫಿರ್ಯಾದಿ ಗಂಡನಿಗೆ ಆರೋಪಿ ನಂ.2 ನೇದವನಾದ ಪರಶುರಾಮ ಬಜಂತ್ರಿ ಈತನು ಚಾಕುವನ್ನು ತೋರಿಸಿ ಅವರ ಬಳಿಯಲ್ಲಿದ್ದ ಆಭರಣಗಳುಃ-

7. 30 ಗ್ರಾಂ ತೂಕದ ಬಂಗಾರದ ಬಿಳಿ ಹರಳಿನ ಉಂಗುರ ಒಂದು
8. 18 ಗ್ರಾಂ ತೂಕದ ಅವಲಕ್ಕಿ ಮಾಟದ ಬಂಗಾರದ ಚೈನ್ ಒಂದು
9. 05 ಗ್ರಾಂ ತೂಕದ ಡಿಸೈನ್ ಬಂಗಾರದ ಉಂಗುರ
10. 20 ಗ್ರಾಂ ತೂಕದ ಬಂಗಾರದ ಗುಂಡಗಡಗಿ ಒಂದು

ಹೀಗೆ ಒಟ್ಟು 180 ಗ್ರಾಂ ತೂಕದ 8,10,000/- ರೂ ಕಿಮ್ಮತ್ತಿನ ಬಂಗಾರದ ಆಭರಣಗಳನ್ನು ಕಿತ್ತುಕೊಂಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ. 380 ಸಹವಾಚಕ 34 ಐಪಿಸಿ ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮೇಲ್ಕಾಣಿಸಿದ ಕಾರಣಕ್ಕಾಗಿ ಆರೋಪಿತರಾದ ನೀವುಗಳು ಫಿರ್ಯಾದಿದಾರರನ್ನು ಸುಲಿಗೆ ಮಾಡಿ ನಂತರ ಅದೇ ಮನೆಯಲ್ಲಿ ಕೋಣೆಯಲ್ಲಿ ಒಳಗೆ ಹಾಕಿ ಬಾಗಿಲದಿ ಹೊರಗಿನ ,ಿಲಕವನ್ನು ಹಾಕಿ ಅಕ್ರಮ ಬಂಧನ ಮಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ. 342 ಸಹವಾಚಕ 34 ಐಪಿಸಿ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲ್ಕಾಣಿಸಿದ ದೋಷಾರೋಪಣೆಗಾಗಿ ನಿಮ್ಮ ಮೇಲೆ ವಿಚಾರಣೆಯಾಗಲು ಆದೇಶಿಸುತ್ತೇನೆ.

Scanned with CamScanner

ಪ್ರಶ್ನೇಃ 1) - ಈ ಆಪಾದನೆಯನ್ನು ಓದಿ ಹೇಳಿದ್ದು ತಿಳಿಯಿತೋ ಹೇಗೆ ?

ಉತ್ತರ-1) ತಿಳಿಯಿತು.

ಪ್ರಶ್ನೇಃ 2) - ಆಪಾದನೆ ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರ-1) ವಿಚಾರಣೆಯಾಗಬೇಕು. Pleaded not guilty

ಓ ಹೇ ಕೇ ಸರಿ ಇದೆ.

1/2/23

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮುಧೋಳ.

1) Vithal @ Vittya Saidu @ Saidappa Mang @ Vittal @ Vittya @ Saiddu @ Saidappa.

2) Parashuram @ Parsya Kullurapp Bajantri @ Parashuram @ Parsya.

Scanned with CamScanner